**ಕರ್ನಾಟಕ ಸರ್ಕಾರ**

ಸಂಖ್ಯೆ:ಆಇ 417 ವೆಚ್ಚ-12/2024

ಕರ್ನಾಟಕ ಸರ್ಕಾರ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:09.08.2024

**ಸುತ್ತೋಲೆ**

ವಿಷಯ : GST ವ್ಯತ್ಯಾಸದ ಮೊತ್ತವನ್ನು ಪಾವತಿ ಮಾಡಲು ಪೂರಕ ಒಪ್ಪಂದ ಮಾಡಿಕೊಳ್ಳುವ ಕುರಿತು.

************

ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪಾವತಿ ಮಾಡಬೇಕಾದ GST ದರಗಳನ್ನು ಸರ್ಕಾರದಿಂದ ಕಾಲಕಾಲಕ್ಕೆ ನಿಗದಿಪಡಿಸಿ ಆದೇಶ ಹೊರಡಿಸಲಾಗಿರುತ್ತದೆ. ಈ ರೀತಿ ಬದಲಾವಣೆ ಮಾಡಿದ ದರಕ್ಕೆ ಅನುಗುಣವಾಗಿ ಗುತ್ತಿಗೆದಾರರಿಗೆ ಪಾವತಿ ಮಾಡಬೇಕಾದ GST ದರ ವ್ಯತ್ಯಾಸದ ಮೊಬಲಗಿಗೆ ಸಂಗ್ರಹಣಾ ಪ್ರಾಧಿಕಾರಗಳ ಹಂತದಲ್ಲಿ ಪುನ: ಆಡಳಿತಾತ್ಮಕ ಅನುಮೋದನೆ ಪಡೆಯಲು ಕ್ರಮವಹಿಸುತ್ತಿರುವುದು ಹಾಗೂ ಪೂರಕ ಒಪ್ಪಂದ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಬಗ್ಗೆ ಪರಿಶೀಲಿಸಲಾಗಿ ಪ್ರಸ್ತಾಪಿತ GST ಮೊತ್ತವನ್ನು ಸರ್ಕಾರದಿಂದ ನಿಗದಿಪಡಿಸಲಾದ ದರಗಳ ಅನ್ವಯ ತೆರಿಗೆಯನ್ನು ಸರ್ಕಾರಕ್ಕೆ ಪಾವತಿ ಮಾಡಬೇಕಾಗುತ್ತದೆ. ಆದ್ದರಿಂದ ಪೂರಕ ಒಪ್ಪಂದ ಮಾಡಿಕೊಳ್ಳುವ ಅಗತ್ಯತೆ ಕಂಡುಬರುವುದಿಲ್ಲ. ಈ ಹಿನ್ನೆಲೆಯಲ್ಲಿ ಪ್ರಸ್ತಾಪಿತ ವಿಷಯದ ಕುರಿತು ಈ ಕೆಳಗಿನಂತೆ ಸೂಚನೆಗಳನ್ನು ನೀಡಲಾಗಿರುತ್ತದೆ:

i. ಈಗಾಗಲೇ ಮಾಡಿಕೊಳ್ಳಲಾದ ಕಾಮಗಾರಿಗಳ ಒಪ್ಪಂದಗಳಿಗೆ ಸಂಬಂಧಿಸಿದಂತೆ GST ವ್ಯತ್ಯಾಸದ ಮೊಬಲಗಿನ ಕುರಿತು ಗುತ್ತಿಗೆದಾರರೊಂದಿಗೆ ಮಾಡಿಕೊಳ್ಳಲಾದ ಒಪ್ಪಂದದಲ್ಲಿ ಸೂಕ್ತ ನಮೂದು ಮಾಡಿಕೊಂಡು ಅದಕ್ಕೆ ಸಂಬಂಧಪಟ್ಟ ಗುತ್ತಿಗೆದಾರರು ಮತ್ತು ಅಧಿಕಾರಿಗಳ ಸಹಿ ಪಡೆದು ಪಾವತಿಗೆ ಕ್ರಮವಹಿಸುವುದು.

ii. ಇನ್ನು ಮುಂದೆ ಮಾಡಿಕೊಳ್ಳಲಾಗುವ ಕಾಮಗಾರಿಗಳ ಒಪ್ಪಂದಗಳಲ್ಲಿ ಗುತ್ತಿಗೆ ಅವಧಿಯಲ್ಲಿ GST ದರಗಳು ಪರಿಷ್ಕರಣೆಯಾದಲ್ಲಿ ಅದರನ್ವಯ ಪಾವತಿ / ಹಿಂಪಾವತಿ ಮಾಡಲು ಸರ್ಕಾರ ಮತ್ತು ಗುತ್ತಿಗೆದಾರರು ಬದ್ಧರರಾಗಿರುತ್ತಾರೆ ಎಂಬ ಅಂಶವನ್ನು ಸೇರ್ಪಡೆ ಮಾಡುವುದು.

ಸಂ: 2705 ದಿ: 20/8/2024
ಜಂಟಿ ಕಾರ್ಯದರ್ಶಿ (ಕೃಭಾಜನಿನಿ)

...2

iii. ಮೇಲಿನಂತೆ GST ದರಗಳ ಹೆಚ್ಚಳದ ಕಾರಣದಿಂದ ಮಾತ್ರ ಮೂಲ ಅಂದಾಜುಗಳು ಪರಿಷ್ಕರಣೆಯಾದಲ್ಲಿ, ಅಂತಹ ಪರಿಷ್ಕೃತ ಅಂದಾಜುಗಳಿಗೆ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಅದರನ್ವಯ ಮುಂದಿನ ಬಿಲ್ಲುಗಳ ಪಾವತಿಗೆ ಕ್ರಮವಹಿಸುವುದು. GST ಹೊರತುಪಡಿಸಿ ಇತರೆ ಕಾರಣಗಳಿಂದ ಮೂಲ ಅಂದಾಜುಗಳು ಪರಿಷ್ಕರಣೆಯಾದಲ್ಲಿ, ಅಂತಹ ಪರಿಷ್ಕೃತ ಅಂದಾಜುಗಳಿಗೆ ನಿಯಮಾನುಸಾರ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯತಕ್ಕದ್ದು.

ಮೇಲಿನ ಸೂಚನೆಗಳನ್ನು ಸರ್ಕಾರದ ಎಲ್ಲಾ ಇಲಾಖೆಗಳು ಹಾಗೂ ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುವ ನಿಗಮ, ಮಂಡಳಿಗಳು ಮತ್ತು ಸ್ವಾಯತ್ತ ಸಂಸ್ಥೆಗಳು ಕಟ್ಟುನಿಟ್ಟಾಗಿ ಪಾಲಿಸುವುದನ್ನು ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು ಖಚಿತಪಡಿಸಿಕೊಳ್ಳತಕ್ಕದ್ದು.

(ಎಲ್.ಕೆ.ಅತೀಕ್, ಭಾ.ಆ.ಸೇ)

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ

ಆರ್ಥಿಕ ಇಲಾಖೆ

**ಇವರಿಗೆ:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು
3. ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು